ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	158
ಮಾನ್ಯ ಸದಸ್ಯರ ಹೆಸರು	ಶ್ರೀ ಎಂ ಕೆ ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	16-07-2019
ಉತ್ತರಿಸಬೇಕಾದ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯದಲ್ಲಿ ಯಾವ ಯಾವ ಪ್ರದೇಶದಲ್ಲಿ ಮಂಗನ ಖಾಯಿಲೆ ಇದೆ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ರಾಜ್ಯದ ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ಕಾರವಾರ, ಮೈಸೂರು, ಬೆಳಗಾವಿ ಮತ್ತು ಹಾಸನ ಜಿಲ್ಲೆಗಳಲ್ಲಿ ಮಂಗನ ಕಾಯಿಲೆ ಸೋಂಕು ಕಂಡುಬಂದಿರುತ್ತದೆ. 2019-20ನೇ ಸಾಲಿನ ಆಯವ್ಯಯ ಭಾಷಣ ಘೋಷಣೆಯಂತೆ ಮಂಗನ ಖಾಯಿಲೆಯ(ಕೆ.ಎಫ್.ಡಿ) ಸಂಶೋಧನೆ ಮತ್ತು ಚಿಕಿತ್ಸೆಗಾಗಿ ಶಿವಮೊಗ್ಗದಲ್ಲಿ **B.S.L-III(Bio Safety Level-3)** ಸಂಶೋಧನಾ ಪ್ರಯೋಗಾಲಯ ನಿರ್ಮಾಣ ಘಟಕವನ್ನು ಅಂದಾಜು ರೂ.5.00 ಕೋಟಿ ವೆಚ್ಚಗಳಲ್ಲಿ ಸ್ಥಾಪಿಸಲು ಕ್ರಮವಹಿಸಲಾಗುತ್ತಿದೆ. ಸರ್ಕಾರ ಕೈಗೂಂಡ ಕ್ರಮಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
ಆ)	ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಮಂಗನ ಖಾಯಿಲೆಗೆ ಚುಚ್ಚುಮದ್ದು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೆ.ಎಫ್.ಡಿ ಚುಚ್ಚು ಮದ್ದಿನ ಕೊರತೆ ಇರುವುದಿಲ್ಲ. 2018-19 ನೇ ಸಾಲಿನಲ್ಲಿ 2,37,000 ಡೋಸ್ ಲಸಿಕೆಗಳನ್ನು ಕೆ.ಎಫ್.ಡಿ ಪೀಡಿತ ಪ್ರದೇಶದಲ್ಲಿ ನೀಡಲಾಗಿದೆ
ಇ)	ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ಮಂಗನ ಖಾಯಿಲೆ ಚುಚ್ಚುಮದ್ದು ಕಡಿಮೆ ಇದ್ದರೂ ಏಕೆ ಕ್ರಮ ಕೈಗೊಂಡಿಲ್ಲ; (ವಿವರ ನೀಡುವುದು)	ಮಂಗನ ಕಾಯಿಲೆ ಚುಚ್ಚು ಮದ್ದಿನ ಕೊರತೆ ಇರುವುದಿಲ್ಲ.
ಈ)	ರಾಜ್ಯದಲ್ಲಿ ಎಷ್ಟು ಪ್ರಕರಣಗಳು ಮಂಗನ ಖಾಯಿಲೆಗೆ ಸಂಬಂಧಿಸಿದ್ದಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ 2018 ನವೆಂಬರ್ 23 ರಿಂದ 2019 ಜುಲೈ 11 ರವರೆಗೆ 445 ಕೆಎಫ್‌ಡಿ ಪ್ರಕರಣಗಳು ವರದಿಯಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.
ಉ)	ಮಂಗನ ಖಾಯಿಲೆ ಹರಡುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ಮಂಗನ ಖಾಯಿಲೆ ಹರಡುವುದನ್ನು ತಡೆಗಟ್ಟಲು ಸರ್ಕಾರ ಕೈಗೂಂಡ ಕ್ರಮಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.

ಆಕುಕ 01 ಎಸ್‌ಎಂಎಂ 2019

(ಶಿವಾನಂದ ಎಸ್ ಪಾಟೀಲ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

[illegible]

1. [illegible]
2. [illegible]
3. [illegible]
4. [illegible]
5. [illegible] 24 [illegible]
6. [illegible]
7. [illegible] 5 [illegible] 6 [illegible] 237000 [illegible]
8. [illegible]
9. [illegible]
10. [illegible]
11. [illegible]
12. [illegible]
13. [illegible] National Institute of Virology Pune [illegible] 12 [illegible]
14. [illegible] Bio Safety Level-3 (BSL-III) [illegible] 5.00 [illegible]

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:158ಕ್ಕೆ ಅನುಬಂಧ- 2

(23-11-2018 ರಿಂದ 11-7-2019 ವರೆಗೆ)

Sl No	Name of the District	Human Cases Positives	Monkey Autopsy Positives	Tick Polls Positives
1	Shimoga	343	21	34
2	Uttara Kannada	93	7	0
3	Hassan	1	1	2
4	Chickamangaluru	1	1	2
5	Udupi	2	11	0
6	Mysore	3	0	0
7	Belagavi	2	0	0
	Total	445	41	38

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:158ಕ್ಕೆ ಅನುಬಂಧ-3

1) 2019-20ನೇ ಸಾಲಿಗೆ 5,17,000 ವರಸೆ ಡೋಸ್ ಕೆಎಫ್‌ಡಿ ಲಸಿಕೆಗಳು ಅವಶ್ಯಕತೆಯಿದ್ದು, ಇವುಗಳನ್ನು ತಯಾರಿಸಲು ಈಗಾಗಲೇ 2019-20 ನೇ ಸಾಲಿನ ಬಜೆಟ್‌ನಲ್ಲಿ ರೂ.5.00 ಕೋಟಿ ಹಣವನ್ನು ಮೀಸಲಿಡಲಾಗಿದೆ.

2) ಕೆ.ಎಫ್.ಡಿ ಭಾಧಿತ ಪ್ರದೇಶಗಳ ಅವಶ್ಯಕತೆಗೆ ಅನುಗುಣವಾಗಿ ಡಿ.ಎಂ.ಪಿ ತೈಲವನ್ನು ಖರೀದಿಸಲು ಆಯಾ ಜಿಲ್ಲಾ ಆರೋಗ್ಯ ಮತ್ತು ಕುಕ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಾಕಷ್ಟು ಪ್ರಮಾಣದ ಉಣ್ಣೆ ವಿಕರ್ಷಕ ಡಿ.ಎ.ಪಿ ತೈಲವನ್ನು ದಾಸ್ತಾನು ಇಡಲಾಗಿದೆ.

3) ಭಾಧಿತ/ಶಂಕಿತ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಣ್ಣೆ ನಾಶಕ್ಕಾಗಿ ಮೆಲಾಥಿಯಾನ್ ಪುಡಿಯನ್ನು ಕನಿಷ್ಟ 10 ಕೆಜಿ ಗೆ ಕಡಿಮೆ ಇಲ್ಲದಂತೆ ಎಲ್ಲಾ ಸಮಯದಲ್ಲೂ ದಾಸ್ತಾನು ಇಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸಲಾಗಿದೆ.

4) ಜಾನುವಾರುಗಳ ಮೈ ಮೇಲಿರುವ ವಯಸ್ಕ ಉಣ್ಣೆಗಳ ನಾಶಕ್ಕಾಗಿ Deltramethrin ಔಷಧಿಯನ್ನು ಪಶು ಸಂಗೋಪನಾ ಇಲಾಖೆಯ ಸಹಯೋಗದಿಂದ ಸಿಂಪಡಿಸಲು ಕ್ರಮ ವಹಿಸಲಾಗಿದೆ.

5) ಅಂತರ ಇಲಾಖಾ ಸಮನ್ವಯ ಸಮಿತಿಯ ಸಭೆಗಳನ್ನು ಆಯಾ ಜಿಲ್ಲೆಯ ಮಾನ್ಯ ಜಿಲ್ಲಾದಿಕಾರಿಗಳ ಅವರ ಅಧ್ಯಕ್ಷತೆಯಲ್ಲಿ ನಡೆಸಲುಕ್ರಮ ವಹಿಸಲಾಗಿದೆ.

6) ಕೆ.ಎಫ್.ಡಿ ಲಸಿಕೆಯನ್ನು ಜುಲೈ ತಿಂಗಳಿಂದಲೇ ಆರಂಭಿಸಿ ವರ್ಷ ಪೂರ್ತಿ ನಡೆಸಲು ಕ್ರಮ ವಹಿಸಲಾಗಿದೆ.

7) ವಿವಿಧ ರೀತಿಯ ಮಾಧ್ಯಮಗಳಾದ ಕರಪತ್ರ, ಫ್ಲೆಕ್ಸ್ ಬ್ಯಾನರ್, ಬೀದಿ ನಾಟಕ, ವಿಡಿಯೋ ತುಣುಕು/ಕಿರುಚಿತ್ರಗಳ ಮುಖಾಂತರ, ಗೋಡೆ ಬರಹಗಳ ಮುಖಾಂತರ ಜನರಿಗೆ ಖಾಯಿಲೆ ಬಗ್ಗೆ ಹಾಗೂ ಅನುಸರಿಸಬಹುದಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಆರೋಗ್ಯ ಶಿಕ್ಷಣದ ಮೂಲಕ ಮಾಹಿತಿ ನೀಡಲು ಕ್ರಮ ವಹಿಸಲಾಗಿದೆ.

8) ಹೆಚ್ಚುವರಿ ಅವಶ್ಯಕ ಸಿಬ್ಬಂದಿಗಳಾದ ಕೀಟ ಶಾಸ್ತ್ರಜ್ಞರು, ಕೀಟ ಸಂಗ್ರಹಣಾ ಕಾರರು ಹಾಗೂ ಡಿ.ಇ.ಓ ಗಳನ್ನು ನೇಮಕ ಮಾಡಲಾಗಿದೆ.

9) ಕೆ.ಎಫ್.ಡಿ ಸಂಕಿತ ಜಿಲ್ಲೆಗಳಲ್ಲಿ ಆರೋಗ್ಯ ಇಲಾಖೆಯ ವೈದ್ಯರು ಹಾಗೂ ಸಿಬ್ಬಂದಿಯವರಿಗೆ ಪುನರ ಮನನ ತರಭೇತಿ ನೀಡಲಾಗುತ್ತಿದೆ.

10) ರೂ.5.00 ಕೋಟಿ ವೆಚ್ಚದಲ್ಲಿ ಶಿವಮೊಗ್ಗದಲ್ಲಿರುವ ಪ್ರಯೋಗಾಲಯವನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ.